## ಕರ್ನಾಟಕ ವಿಧಾನ ಪರಿಷತ್ತು

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭವನದ ಅಧಿಕೃತ ವಾಹನಗಳಾದ ಇಟಿಯೋಸ್ ವಾಹನಗಳಿಗೆ ಮೈಲೇಜ್ ನಿಗಧಿಪಡಿಸುವ ಬಗ್ಗೆ.

******

**ಓದಲಾಗಿದೆ:**

1. ವಾಹನ ಚಾಲಕರ ಮನವಿ ದಿನಾಂಕ:19.05.2022.
2. ಪತ್ರ ಸಂಖ್ಯೆ:ಕವಿಪ:ಶಾಭ:ಮೈನಿ:2022. ದಿನಾಂಕ:22.06.2022.
3. ಮೋಟಾರು ವಾಹನದ ತಪಾಸಣಾಧಿಕಾರಿ. ಸಾರಿಗೆ ಇಲಾಖೆ. ಇವರ ಪತ್ರ ದಿ:23.06.2022.
4. ಕಡತ ಸಂ:ಕವಿಪ:ಶಾಭ:ಪ್ರಕಾ:12:2011. ಕಂಡಿಕೆ ಸಂಖ್ಯೆ: 107 ರಿಂದ 112 ರವರೆಗೆ.

**ಪ್ರಸ್ತಾವನೆ:**

ಓದಲಾಗಿರುವ ಕ್ರಮ ಸಂಖ್ಯೆ(1)ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ವಾಹನ ಚಾಲಕರುಗಳು ಶಾಸಕರ ಭವನದ ಸರ್ಕಾರಿ ಅಧಿಕೃತ ವಾಹನಗಳಾದ ಇಟಿಯೋಸ್ ವಾಹನಗಳಿಗೆ ಹಾಲಿ ಒಂದು ಲೀಟರ್ ಪೆಟ್ರೋಲ್‌ಗೆ 10 ಕಿ ಮೀ ಮೈಲೇಜ್ ನಿಗಧಿಪಡಿಸಿದ್ದು. ಅದರ ಬದಲಿಗೆ ಒಂದು ಲೀಟರ್‌ಗೆ 8 ಕಿ ಮೀ ಮೈಲೇಜ್ ನಿಗದಿಪಡಿಸುವಂತೆ ಕೋರಿರುತ್ತಾರೆ.

ಓದಲಾಗಿರುವ ಕ್ರಮ ಸಂಖ್ಯೆ(2)ರಲ್ಲಿ ಶಾಸಕರ ಭವನದ ಇಟಿಯೋಸ್ ವಾಹನಗಳನ್ನು ಪರೀಕ್ಷಿಸಿ ಹೊಸದಾಗಿ ಮೈಲೇಜ್ ನಿಗಧಿಪಡಿಸುವಂತೆ ಆಯುಕ್ತರು. ಸಾರಿಗೆ ಇಲಾಖೆ ಇವರನ್ನು ಕೋರಲಾಗಿತ್ತು.

ಓದಲಾಗಿರುವ ಕ್ರಮ ಸಂಖ್ಯೆ (3)ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭವನದ ಸರ್ಕಾರಿ ಅಧಿಕೃತ ವಾಹನಗಳಾದ ಇಟಿಯೋಸ್ ವಾಹನಗಳಿಗೆ ಮೋಟಾರು ವಾಹನದ ತಪಾಸಣಾಧಿಕಾರಿ. ಸಾರಿಗೆ ಇಲಾಖೆ. ಇವರು ಪ್ರತಿ ಲೀಟರ್ ಪೆಟ್ರೋಲ್‌ಗೆ 09 ಕಿ.ಮೀ. ಮೈಲೇಜ್ ನೀಡುತ್ತಿರುವುದಾಗಿ ವರದಿ ನೀಡಿರುತ್ತಾರೆ. ಓದಲಾಗಿರುವ ಕ್ರಮ ಸಂಖ್ಯೆ (4)ರಲ್ಲಿ ಒಂದು ಲೀಟರ್ ಪೆಟ್ರೋಲ್‌ಗೆ 09 ಕಿ.ಮೀ. ಮೈಲೇಜ್ ನಿಗಧಿಪಡಿಸುವ ಪ್ರಸ್ತಾವನೆಗೆ ಮಾನ್ಯ ಸಭಾಪತಿಯವರು ಅನುಮೋದನೆ ನೀಡಿರುತ್ತಾರೆ.

**ಆದೇಶ ಸಂಖ್ಯೆ: ಕವಿಪ:ಅ–1:19:ಮೈನಿ:2022**
**ಬೆಂಗಳೂರು, ದಿನಾಂಕ:11.07.2022.**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ. ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭವನದ ಸರ್ಕಾರಿ ಅಧಿಕೃತ ವಾಹನಗಳಾದ ಇಟಿಯೋಸ್ ವಾಹನಗಳಿಗೆ ಪ್ರತಿ ಒಂದು ಲೀಟರ್ ಪೆಟ್ರೋಲ್‌ಗೆ 09 ಕಿ.ಮೀ. ಮೈಲೇಜ್ ನಿಗಧಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಮಾನ್ಯ ಸಭಾಪತಿಯವರ ಆದೇಶಾನುಸಾರ.

(ಎಸ್. ನಿರ್ಮಲ)
ಅಪರ ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು.

–2

**ಪ್ರತಿಗಳು:**

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
3. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
4. ಅಪರ/ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರುಗಳಿಗೆ, ಕವಿಪ.
5. ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ/ ಲೆಕ್ಕಪತ್ರ ಶಾಖೆ, ಕವಿಪ.
6. ಕ್ಷೇತ್ರಾಧಿಕಾರಿ, ಶಾಸಕರ ಭವನ ಕವಿಪ.
7. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
8. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿ.